17. ಕನ್ನಡ ವಿಶ್ವವಿದ್ಯಾನಿಲಯ

1. ಆರ್. ಕೃಷ್ಣಪ್ಪ

ಸಭಾಧ್ಯಕ್ಷರ ನಿರ್ಣಯಗಳು

ಸದನದಲ್ಲಿ ಅಧ್ಯಕ್ಷರ ಹೆಸರನ್ನು ಪ್ರಸ್ತಾಪಿಸುವ ಬಗ್ಗೆ

ದಿನಾಂಕ: 31-12-1994ರಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರವರು ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಪ್ರಸ್ತಾವದ ಚರ್ಚೆಗೆ ವಿಸ್ತೃತವಾದ ಉತ್ತರ ನೀಡುವ ಈ ಸಂದರ್ಭದಲ್ಲಿ ಅನೇಕ ಪ್ರಮುಖ ವಿಚಾರಗಳನ್ನು ಸಹ ಪ್ರಸ್ತಾಪ ಮಾಡಿರುತ್ತಾರೆ. ತಮ್ಮ ಭಾಷಣದ ಪ್ರಾರಂಭಿಕ ಹಂತದಲ್ಲಿ ಒಂದು ಗಹನವಾದ ವಿಷಯವನ್ನು ಪ್ರಸ್ತಾಪಿಸುತ್ತಾ ಈ ಸದನದ ಸದಸ್ಯರೆಲ್ಲವರ ಹೆಸರನ್ನು ಸದನದ ಕಲಾಪದ ಸಂದರ್ಭದಲ್ಲಿ ಪ್ರಸ್ತಾಪಿಸಿ ಅವರ ಬಗ್ಗೆ ಆರೋಪಗಳನ್ನು ಮಾಡುವುದು ಸದನಕ್ಕೆ ಶೋಭೆ ತರುವಂತಹ ವಿಷಯವಲ್ಲವೆಂದು ತಿಳಿಸಿ ಪ್ರತಿಯೊಂದು ರಾಜಕೀಯ ಪಕ್ಷದಲ್ಲೂ ಯಾವ ಯಾವ ಸಂದರ್ಭದಲ್ಲಿ ಏನೇನು ಘಟನೆಗಳು ಆಗಿವೆ ಎಂಬುದನ್ನು ವಿಶ್ಲೇಷಿಸುವುದು ಆರೋಗ್ಯಕರ ಬದಲಾವಣೆಯಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ರಾಷ್ಟ್ರದ ರಾಜಕೀಯದಲ್ಲಿ ಪರಸ್ಪರ ದೋಷರೋಷಣೆಗಳನ್ನು ಮಾಡುವ ಪ್ರವೃತ್ತಿಯಿಂದ ಇಂದಿನ ರಾಜಕೀಯ ಜೀವನದಲ್ಲಿ ಯಾರಿಗೂ ಗೌರವ ಉಳಿದಿಲ್ಲ ಮತ್ತು ಯಾವ ರಾಜಕೀಯ ಪಕ್ಷಗಳಿಗೂ ಗೌರವ ಉಳಿದಿಲ್ಲವೆಂದು ಮನ ನೊಂದು ನುಡಿದಿದ್ದಾರೆ.

ಬಹು ದೀರ್ಘ ಕಾಲದ ಸಾರ್ವಜನಿಕ ಅನುಭವದ ಹಿನ್ನೆಲೆಯಿಂದ ತಮ್ಮ ಚಿಂತನೆಯಲ್ಲಿ ರೂಪುಗೊಂಡಿರುವ ಭಾವನೆಗಳನ್ನು ಸಮರ್ಪಕ ಆಡಳಿತ ನಡೆಸುವ ದೃಷ್ಟಿಯಲ್ಲಿ ಕೃತಿಗೆ ಇಳಿಸಬಯಸುತ್ತೇನೆಂಬ ಮಾತನ್ನು ಆಡುತ್ತಾ ರಾಜಕೀಯ ಕಾರಣಗಳಿಗಾಗಿ ಎದುರಾಳಿಗಳನ್ನು ಹಿಂಸಿಸುವ ಅಥವಾ ದ್ವೇಷಿಸುವ ಕೃತ್ಯ ಮಾಡಬಯಸುವುದಿಲ್ಲವೆಂಬ ಮಾತನ್ನು ಸಹ ಸನ್ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಿರುತ್ತಾರೆ. ಕರ್ನಾಟಕ ಸಾರ್ವಜನಿಕ ರಂಗದಲ್ಲಿ ಲೋಕಾಯುಕ್ತ ಸಂಸ್ಥೆ ನಿರ್ವಹಿಸಿರುವ ಪಾತ್ರ ಪ್ರಸ್ತಾಪಿಸುತ್ತಾ ತಾವು ಸಹ ಈ ಹಿಂದೆ ಲೋಕಾಯುಕ್ತರ ಮುಂದೆ ಹಾಜರಾದ ಸಂದರ್ಭವನ್ನು ಸ್ಮರಿಸಿಕೊಂಡು ಕಾನೂನಿಗೆ ಮೀರಿದವರು ಯಾರು ಇಲ್ಲ ಹಾಗೂ ಕಾನೂನಿಗೆ ಎಲ್ಲರೂ ತಲೆಬಾಗಲೇಬೇಕಾಗುತ್ತದೆಂಬುದೇ ತಮ್ಮ ಧ್ಯೇಯವೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ನಡವಳಿಕೆಯನ್ನು ಸಮರ್ಥಿಸಿಕೊಂಡರು. ಮತ್ತೊಂದು ಹಂತದಲ್ಲಿ ಕರ್ನಾಟಕದ ಐದು ಕೋಟಿ ಜನರು ವಿಶ್ವಾಸವಿಟ್ಟು ಸದನಕ್ಕೆ ಕಳಿಸಿರತಕ್ಕಂಥ ಪ್ರತಿನಿಧಿಗಳ ಸದನಕ್ಕೆ ಮುಚ್ಚಿಡಬೇಕಾದುದು ಹಾಗೂ ಮರೆ ಮಾಚಬೇಕಾದುದು ಏನೂ ಇಲ್ಲವೆಂದು ತಾವು ಸಹ ಈ ಪರಂಪರೆಯನ್ನು ಕಾಪಾಡಿಕೊಂಡು ಬರುವುದಾಗಿಯೂ ಸ್ಪಷ್ಟೀಕರಿಸಿರುತ್ತಾರೆ.

ಕೇಂದ್ರ ಸರ್ಕಾರದ ಸಚಿವರೊಬ್ಬರ ಬಗ್ಗೆ ಮಾಡಲಾಗಿರುವ ಆಪಾದನೆ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸುತ್ತಾ ವೈಯಕ್ತಿಕವಾಗಿ ರಾಜಕೀಯ ಭಿನ್ನಾಭಿಪ್ರಾಯಗಳ ಆಧಾರದ ಮುಖೇನ ಸೇಡು ತೀರಿಸಿಕೊಳ್ಳಲು ಅಧಿಕಾರಿ ಯಂತ್ರವನ್ನು ಉಪಯೋಗಿಸಿಕೊಳ್ಳಲು ಇಚ್ಚಿಸುವುದಿಲ್ಲವೆಂದು ಸ್ಪಷ್ಟೀಕರಿಸುತ್ತಾ ಇಂತಹುದೇ ಭೂ ಹಗರಣಗಳಲ್ಲಿ ಸಿಕ್ಕಿ ಹಾಕಿಕೊಂಡಿರುವ ಅನೇಕ ಭೂ ಪ್ರಕರಣಗಳು ಜೀವಂತವಿರುವಾಗ ಕೇವಲ ಒಂದು ಘಟನೆಯನ್ನು ರಾಜಕೀಯ ಕಾರಣಕ್ಕೆ ಪ್ರತ್ಯೇಕಿಸಿ ಆಧ್ಯತೆಯ ಮೇಲೆ ವಿಚಾರಣೆಗೆ ಗುರಿಪಡಿಸಿ ರಾಜಕೀಯ ಸೇಡಿನ ಪ್ರೇರಣೆಯಿಂದ ನಡೆಸಲಾಯಿತೆಂಬ ಅರ್ಥ ಬರುವಂತಹ ಒಂದು ಪ್ರಕರಣಕ್ಕೆ ನಾಂದಿಯಾಗಬಾರದೆಂಬ ಉದ್ದೇಶದಿಂದ ತಾವು ದೆಹಲಿಯಲ್ಲಿ ಈ ವಿಷಯದ ಬಗ್ಗೆ ಆಡಿದ ಮಾತುಗಳನ್ನು ಸಮರ್ಥಿಸಿಕೊಂಡರು. ತಮ್ಮ ಮಾತನ್ನು ಮುಂದುವರಿಸುತ್ತಾ ಸಾಮಾನ್ಯ ಜನತೆ ಯಾವುದೇ ಸರ್ಕಾರಿ ಕಛೇರಿಗೆ ಹೋದಾಗ

ಅವರ ಕೆಲಸ ತೃಪ್ತಿಕರವಾಗಿ ನಿರ್ವಹಿಸಿಕೊಳ್ಳುವ ವಾತಾವರಣ ಏರ್ಪಾಡು ಮಾಡುತ್ತೇವೆಂದು ಘೋಷಣೆಯನ್ನು ಮಾಡುತ್ತಾ ಕರ್ನಾಟಕ ರಾಜ್ಯದ ಎಲ್ಲಾ ಹಂತಗಳಲ್ಲೂ ಅತ್ಯುತ್ತಮ ಅಧಿಕಾರಿಗಳು ಇರುವ ಬಗ್ಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಿರುತ್ತಾರೆ. ಆದರೆ, ಕೆಳಸ್ತರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳ ಮೇಲೆ ರಾಜಕೀಯ ಒತ್ತಡಗಳು ಹೆಚ್ಚಾಗಿ ಬರುವುದರಿಂದ ಅವರು ನಿಷ್ಪಕ್ಷಪಾತವಾಗಿ ಕೆಲಸ ನಿರ್ವಹಿಸಲು ಸಾಧ್ಯವಾಗುವುದಿಲ್ಲವೆಂಬ ಮಾತನ್ನು ತಮ್ಮ ದೀರ್ಘ ಸಾರ್ವಜನಿಕ ಅನುಭವದ ಹಿನ್ನೆಲೆಯಲ್ಲಿ ಅರ್ಥೈಸಿರುತ್ತಾರೆ.

ವಿಧಾನ ಸೌಧದ ಮಟ್ಟದ ಕೇವಲ ಒಬ್ಬ ಕಾರ್ಯದರ್ಶಿಯ ಮಟ್ಟದ ಅಧಿಕಾರಿಯನ್ನು ಬದಲಾವಣೆ ಮಾಡುವುದರಿಂದ ಹೆಚ್ಚಿನ ಬದಲಾವಣೆ ನಿರೀಕ್ಷೆ ಮಾಡುವುದು ಸಾಧ್ಯವಾಗುವುದಿಲ್ಲವೆಂದು ತಿಳಿಸುತ್ತಾ ಎಲ್ಲಾ ಹಂತಗಳಲ್ಲೂ ಕೆಲವು ಆಡಳಿತಾತ್ಮಕ ಸುಧಾರಣೆಗಳನ್ನು ತರುವುದು ಅಗತ್ಯವೆಂದು ತಿಳಿಸಿರುತ್ತಾರೆ. ಈ ಹಂತದಲ್ಲಿ ಹಿಂದಿನ ಓರ್ವ ಜಿಲ್ಲಾಧಿಕಾರಿಯವರು ಉಚ್ಚ ನ್ಯಾಯಾಲಯದ ಆಜ್ಞೆಯನ್ನು ರಾಜಕೀಯ ಒತ್ತಡಗಳ ಕಾರಣದಿಂದಾಗಿ ಅನುಷ್ಠಾನಗೊಳಿಸಲು ಸಾಧ್ಯವಿಲ್ಲವೆಂದು ಹೀಗೆ ತಿಳಿಸಿದರೆಂದು ನೊಂದು ಸ್ಮರಿಸಿಕೊಂಡು ಈ ಸಂದರ್ಭದಲ್ಲಿ ಹೀಗೆ ಹೇಳಿದರು.

"This Government will never allow such a thing to happen. I will take that responsibility".

ಈ ಸಂದರ್ಭದಲ್ಲಿ ತಾವು ಯಾವುದೇ ಒಬ್ಬ ಸದಸ್ಯರನ್ನು ಕುರಿತು ಮಾತನಾಡುವುದಿಲ್ಲವೆಂಬ ಅಂಶ ಕಡತಗಳನ್ನು ಪರಿಶೀಲಿಸಿದಾಗ ಗೋಚರವಾಗುತ್ತದೆಂದು ತಿಳಿಸಿರುತ್ತಾರೆ. ಅವರು ತಮ್ಮ ಮಾತನ್ನು ಮುಂದುವರೆಸಿ ಯಾವ ಜಿಲ್ಲಾಧಿಕಾರಿಯವರೆ ಇರಲಿ "If he is not going to act in accordance with the Law, his suspension order will go. I am not under the mercy of any Deputy Commissioner or Superitendent of Police". ಎಂದು ಹೇಳುತ್ತಾ ಅಂತಹವರ ಬಗ್ಗೆ ತಮ್ಮ ಸರ್ಕಾರಕ್ಕೆ ಯಾವುದೇ ದಾಕ್ಷಿಣ್ಯ ಇಲ್ಲವೆಂದು ನುಡಿದಿದ್ದಾರೆ. ಯಾವುದೇ ಕಾರಣಕ್ಕೆ ಹೈಕೋರ್ಟ್ ಆದೇಶವನ್ನು ಜಾರಿಗೆ ತರಲು ಆಗುವುದಿಲ್ಲವೆಂದು ಹೇಳುವ ಅಥವಾ ಸ್ಥಳೀಯ ಶಾಸಕರು ನಮ್ಮನ್ನು ಬಿಡುವುದಿಲ್ಲವೆಂದು ನೆಪವೊಡ್ಡಿ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪ್ರವೃತ್ತಿ ನಮ್ಮ ಸರ್ಕಾರದ್ದಲ್ಲ ಎಂದು ಒತ್ತಿ ಹೇಳಿರುತ್ತಾರೆ.

ಈ ಹಂತದಲ್ಲಿ ಸನ್ಮಾನ್ಯ ಶಾಸಕರುಗಳಾದ ಸರ್ವ ಶ್ರೀ ಎಂ. ವೀರಪ್ಪಮೊಯಿಲಿ, ಹೆಚ್.ಎನ್. ನಂಜೇಗೌಡ ಮತ್ತು ವಾಟಾಳ್ ನಾಗರಾಜ್‌ರವರು ಮಧ್ಯೆ ಪ್ರವೇಶಿಸಿ ಅಂತಹ ಶಾಸಕರು ಯಾರು ಎಂಬುದನ್ನು ಬಯಲು ಮಾಡಬೇಕೆಂದು ಒತ್ತಾಯಿಸಿದಾಗ ಸನ್ಮಾನ್ಯ ಮುಖ್ಯ ಮಂತ್ರಿಗಳು "ಅನಾವಶ್ಯಕವಾಗಿ ಈ ಸದನದಲ್ಲಿ ಯಾರ ಹೆಸರನ್ನು ತೆಗೆದುಕೊಂಡು ಮಾತನಾಡಲು ಹೋಗಲಿಲ್ಲ" ಎಂದು ಸ್ಪಷ್ಟಪಡಿಸಿದ್ದಾರೆ. ಮೇಲೆ ತಿಳಿಸಿದ ಸದಸ್ಯರ ವಾಗ್ವಾದ ಮುಂದುವರಿದ ಹಂತಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಿ ಸನ್ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿದ್ದಾರೆ.

"ನಾನು ಯಾರ ಹೆಸರನ್ನು ತೆಗೆದುಕೊಂಡು ವಾದ ಮಾಡಲಿಕ್ಕೆ ಹೋಗಲಿಲ್ಲ. ಆದರೆ ಒಂದು ಶಬ್ದ ಏನು ಹೇಳಿದೆ ಎಂದರೆ ಜಿಲ್ಲಾಧಿಕಾರಿಯಾದವರು, ಪೊಲೀಸ್ ಸೂಪರಿಂಟೆಂಡೆಂಟ್ ಆದವರು ರಾಜಕೀಯ ಒತ್ತಡಕ್ಕೆ ಮಣಿದು ತಮ್ಮ ಕರ್ತವ್ಯದಲ್ಲಿ ಚ್ಯುತಿಯನ್ನು ಮಾಡಲು ಇನ್ನು ಮುಂದಕ್ಕೆ ಬಿಡುವುದಿಲ್ಲ" ಎಂದು ಸ್ಪಷ್ಟಪಡಿಸಿದ್ದಾರೆ.

ವಿಷಯದ ಚರ್ಚೆ ಮುಂದುವರಿದು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಶಾಸಕರುಗಳಾದ ಶ್ರೀ ಕಮರುಲ್ಲಾ ಇಸ್ಲಾಂ, ಶ್ರೀ ವಾಟಾಳ್ ನಾಗರಾಜ್, ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀ ಕೆ.ಎಸ್. ಈಶ್ವರಪ್ಪ, ಶ್ರೀ ವೈ.

ರಾಮಕೃಷ್ಣ ಇವರೆಲ್ಲರೂ ಕೂಡಿ ಸಂಬಂಧಿಸಿದ ಶಾಸಕರ ಹೆಸರನ್ನು ಬಹಿರಂಗಗೊಳಿಸಬೇಕೆಂದು ಒತ್ತಾಯಪಡಿಸಿದಾಗ ಸನ್ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿದ್ದಾರೆ.

"ನಾನು ಯಾವ ಶಾಸಕರ ಹೆಸರನ್ನು ತೆಗೆದುಕೊಂಡು ಅವಹೇಳನ ಮಾಡಬೇಕೆಂದು ನನ್ನ ಉದ್ದೇಶ ಅಲ್ಲ".

ಸನ್ಮಾನ್ಯ ಸದಸ್ಯರುಗಳಾದ ಶ್ರೀ ವಾಟಾಳ್ ನಾಗರಾಜ್, ಶ್ರೀ ಹೆಚ್.ಎನ್. ನಂಜೇಗೌಡ ಹಾಗೂ ವಿರೋಧ ಪಕ್ಷದ ನಾಯಕರು ಮುಂದುವರೆದು ನ್ಯಾಯಬದ್ಧವಾದ ಕೆಲಸವನ್ನು ನಿರ್ವಹಿಸಲು ಆಗದಿರುವ ರೀತಿಯಲ್ಲಿ ಜಿಲ್ಲಾಧಿಕಾರಿಯೊಬ್ಬರ ಮೇಲೆ ರಾಜಕೀಯ ಒತ್ತಡ ಹೇರಲು ಪ್ರಯತ್ನಿಸಿದ ಶಾಸಕರ ಹೆಸರನ್ನು ಬಹಿರಂಗಪಡಿಸಲೇಬೇಕೆಂದು ಒತ್ತಾಯಪಡಿಸಿ ತಮ್ಮ ವಾದವನ್ನು ಪಟ್ಟು ಹೂಡಿದರು. ಈ ಹಂತದಲ್ಲಿ ಸದನದ ಕಲಾಪಗಳು ಸುಸೂತ್ರವಾಗಿ ನಡೆದುಕೊಂಡು ಹೋಗುವ ದೃಷ್ಟಿಯಿಂದ ಹಾಗೂ ಈ ವಿಷಯವನ್ನೇ ಎತ್ತಿಕೊಂಡು ಸಂಧಿಗ್ಧತೆ ಉಂಟು ಮಾಡಿ ಕಲಾಪಗಳು ಸ್ಥಗಿತಗೊಳ್ಳುವುದನ್ನು ತಪ್ಪಿಸುವ ದೃಷ್ಟಿಯಿಂದ ಅಧ್ಯಕ್ಷ ಸ್ಥಾನದಲ್ಲಿದ್ದ ನಾನು ಮಧ್ಯೆ ಪ್ರವೇಶಿಸಿ ಸನ್ಮಾನ್ಯ ಮುಖ್ಯಮಂತ್ರಿಗಳ ವಶದಲ್ಲಿರುವ ಎಲ್ಲಾ ದಾಖಲೆಗಳನ್ನು ತರಿಸಿ ಅವಲೋಕನ ಮಾಡಿ ನನ್ನ ತೀರ್ಪನ್ನು ನೀಡುತ್ತೇನೆಂದು ಹೇಳಿ ನನ್ನ ತೀರ್ಪನ್ನು ಕಾಯ್ದಿರಿಸಿ ಮುಂದಿನ ಕಾರ್ಯಕ್ರಮ ನಡೆಯಲು ಅನುವು ಮಾಡಿಕೊಟ್ಟಿನು.

ತದನಂತರ ಸನ್ಮಾನ್ಯ ಮುಖ್ಯಮಂತ್ರಿಗಳ ವಶದಲ್ಲಿದ್ದ ಎಲ್ಲಾ ದಾಖಲೆಗಳನ್ನು ಪತ್ರಗಳನ್ನು ಅವರು ನನಗೆ ಕಳುಹಿಸಿಕೊಟ್ಟಿದ್ದು, ಅವುಗಳನ್ನು ನಾನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಿ ಈ ತೀರ್ಮಾನಕ್ಕೆ ಬಂದಿರುತ್ತೇನೆ.

ಸನ್ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಸದನದ ಸದಸ್ಯರು ಮಂಡಿಸಿದ ಅಭಿಪ್ರಾಯಗಳಿಗೆ ಸಭಾ ನಾಯಕರಾದ ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವ ಸಂದರ್ಭದಲ್ಲಿ ತಮ್ಮ ಸರ್ಕಾರದ ಆಡಳಿತ ಯಾವ ರೀತಿಯದಾಗಿರುತ್ತದೆಂದು ವಿವರಿಸುವಾಗ ರಾಜಕೀಯ ಒತ್ತಡಗಳಿಂದ ಮುಕ್ತವಾಗಬೇಕೆಂಬ ಮಾತಿನ ಹೆಚ್ಚು ಒತ್ತನ್ನು ಕೊಟ್ಟು ಹೇಳಿದ್ದಾರೆ. ಸದನದ ಎಲ್ಲಾ ನಡುವಳಿಕೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಸನ್ಮಾನ್ಯ ಮುಖ್ಯ ಮಂತ್ರಿಗಳು ಆಡಳಿತ ವೈಖರಿಯನ್ನು ವಿಶ್ಲೇಷಿಸಲು ಒಂದು ಉದಾಹರಣೆಯನ್ನು ನೀಡಿರುವ ಅಂಶ ಕಂಡು ಬಂದಿದೆಯೇ ಹೊರತು ಸದನದ ಯಾವುದೇ ಒಬ್ಬ ಸದಸ್ಯರನ್ನಾಗಲಿ ಅಥವಾ ಮಾಜಿ ಸದಸ್ಯರನ್ನಾಗಲಿ ಮನಸ್ಸಿನಲ್ಲಿಟ್ಟುಕೊಂಡು ಈ ಮಾತುಗಳನ್ನು ಹೇಳಿರುವುದಿಲ್ಲವೆಂಬುದು ಸ್ವಯಂ ಸ್ಪಷ್ಟವಾಗುತ್ತದೆ. ಹಾಗೆಯೇ ಜಿಲ್ಲೆಯ ಆಡಳಿತ ಸೂತ್ರವನ್ನು ಹಿಡಿದಿರತಕ್ಕಂತ ಒಬ್ಬ ಜಿಲ್ಲಾಧಿಕಾರಿಗಳಾಗಲಿ ಅಥವಾ ಅರಕ್ಷಕ ಅಧ್ಯಕ್ಷರಾಗಲಿ ರಾಜಕೀಯ ಒತ್ತಡ ತಮ್ಮ ಮೇಲೆ ಇದೆಯೆಂಬ ನೆಪವೊಡ್ಡಿ ಕರ್ತವ್ಯ ಚ್ಯುತಿ ಮಾಡಲು ಅವಕಾಶ ಕೊಡುವುದಿಲ್ಲವೆಂಬ ಅಂಶವನ್ನು ಸ್ಪಷ್ಟಪಡಿಸುವ ಸಂದರ್ಭದಲ್ಲಿ ಶಾಸಕರೊಬ್ಬರು ರಾಜಕೀಯ ಒತ್ತಡವನ್ನು ತಂದಿದ್ದಾರೆಂಬ ಮಾತುಗಳನ್ನು ಆಡಿದ್ದಾರೆಯೇ ಹೊರತು ಸದಸ್ಯರನ್ನು ಕುರಿತು ಅವಹೇಳನ ಮಾಡುವ ದೃಷ್ಟಿಯಿಂದಲ್ಲವೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ಸಾಬೀತಾಗಿರುತ್ತದೆ. ಸಾರ್ವಜನಿಕ ಬದುಕಿನಲ್ಲಿ ರಾಜಕಾರಣಿಗಳು ಪರಸ್ಪರ ದೋಷಾರೋಷಣೆ ಮಾಡಿಕೊಳ್ಳುವುದರಿಂದ ಇಂದಿನ ರಾಜಕೀಯ ಬದುಕಿನಲ್ಲಿ ಯಾರಿಗೂ ಗೌರವ ಉಳಿದಿಲ್ಲವೆಂಬ ಮಾತನ್ನು ಸಹ ಸನ್ಮಾನ್ಯ ಮುಖ್ಯಮಂತ್ರಿಗಳು ನೊಂದು ನುಡಿದಿರುವ ವಿಷಯವನ್ನು ಇಲ್ಲಿ ಉಲ್ಲೇಖಿಸಬಹುದು.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಸಮರ್ಪಕ ಆಡಳಿತ ನಡೆಸುವ ಹೊಣೆ ಹೊತ್ತಿರುವ ಒಬ್ಬ ವ್ಯಕ್ತಿಯು ಆಡಳಿತ ವೈಖರಿಯನ್ನು ವಿಶ್ಲೇಷಿಸುವ ಸಂದರ್ಭದಲ್ಲಿ

ಒಂದು ಉದಾಹರಣೆಯ ಮೂಲಕ ಅರ್ಥೈಸಿದ ಮಾತನ್ನು ಅನಗತ್ಯವಾದ ಗೂಡಾರ್ಥ ಹುಡುಕಿ ಸದನದ ಗಾಂಭೀರ್ಯ ಮತ್ತು ಸಾಮರಸ್ಯವನ್ನು ಕಡೆಗಣಿಸುವ ಬದಲು ಉತ್ತಮ ಸಂಪ್ರದಾಯ ವಿರ್ಪಾಡಾಗಬೇಕೆಂಬುದು ನನ್ನ ದೃಢ ಅನಿಸಿಕೆ. ಈ ಸಂದರ್ಭದಲ್ಲಿ ಈ ಸದನದ ಎಲ್ಲಾ ಸನ್ಮಾನ್ಯ ಶಾಸಕರುಗಳಲ್ಲಿ ವಿನಂತಿಸುವುದೇನೆಂದರೆ ನಾವು ಯಾವುದೇ ಸಂದರ್ಭದಲ್ಲಿ ಮಾತನಾಡುವಾಗ ಯಾರೋ ಒಬ್ಬ ನಿರ್ದಿಷ್ಟ ವ್ಯಕ್ತಿಯನ್ನು ಕುರಿತು ಮಾತನಾಡಿದ್ದೇವೆ ಎನ್ನತಕ್ಕಂಥ ಒಂದು ಅಭಿಪ್ರಾಯ ಬರುವಂಥ ಸನ್ನಿವೇಶ ಸೃಷ್ಟಿಯಾಗದ ರೀತಿಯಲ್ಲಿ ಎಚ್ಚರ ವಹಿಸಿದರೆ ಈ ಸದನದ ಕಲಾಪಗಳ ಇಂತಹ ಸಂಧಿಗ್ಧತೆಯಿಂದ ಪಾರಾಗಬಹುದೆಂದು ಸ್ಪಷ್ಟಪಡಿಸಲಿಚ್ಛಿಸುತ್ತೇನೆ. ಈ ದಿಸೆಯಲ್ಲಿ ತಮ್ಮೆಲ್ಲರ ಅರ್ಥಪೂರ್ಣ ಸಹಕಾರ ಅತ್ಯಾವಶ್ಯಕ. ಆದುದರಿಂದ, ಈ ವಿಷಯವನ್ನು ಇಲ್ಲಿಗೆ ಉಲ್ಲೇಖಿಸಬಹುದು.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಸಮರ್ಪಕ ಆಡಳಿತ ನಡೆಸುವ ಹೊಣೆ ಹೊತ್ತಿರುವ ಒಬ್ಬ ವ್ಯಕ್ತಿಯು ಆಡಳಿತ ವೈಖರಿಯನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಒಂದು ಉದಾಹರಣೆಯ ಮೂಲಕ ಅರ್ಥೈಸಿದ ಮಾತನ್ನು ಅನಗತ್ಯವಾದ ಗೂಡಾರ್ಥ ಹುಡುಕಿ ಸದನದ ಗಾಂಭೀರ್ಯ ಮತ್ತು ಸಾಮರಸ್ಯವನ್ನು ಕಡೆಗಣಿಸುವ ಬದಲು ಉತ್ತಮ ಸಂಪ್ರದಾಯ ವಿರ್ಪಾಡಾಗಬೇಕೆಂಬುದು ನನ್ನ ದೃಢ ಅನಿಸಿಕೆ. ಈ ಸಂದರ್ಭದಲ್ಲಿ ಈ ಸದನದ ಎಲ್ಲಾ ಸನ್ಮಾನ್ಯ ಶಾಸಕರುಗಳಲ್ಲಿ ವಿನಂತಿಸುವುದೇನೆಂದರೆ ನಾವು ಯಾವುದೇ ಸಂದರ್ಭದಲ್ಲಿ ಮಾತನಾಡುವಾಗ ಯಾರೋ ಒಬ್ಬ ನಿರ್ದಿಷ್ಟ ವ್ಯಕ್ತಿಯನ್ನು ಕುರಿತು ಮಾತನಾಡಿದ್ದೇವೆ ಎನ್ನತಕ್ಕಂಥ ಒಂದು ಅಭಿಪ್ರಾಯ ಬರುವಂತಹ ಸನ್ನಿವೇಶ ಸೃಷ್ಟಿಯಾಗದ ರೀತಿಯಲ್ಲಿ ಎಚ್ಚರ ವಹಿಸಿದರೆ ಈ ಸದನದ ಕಲಾಪಗಳು ಇಂತಹ ಸಂಧಿಗ್ಧತೆಯಿಂದ ಪಾರಾಗಬಹುದೆಂದು ಸ್ಪಷ್ಟಪಡಿಸಲಿಚ್ಛಿಸುತ್ತೇನೆ. ಈ ದಿಸೆಯಲ್ಲಿ ತಮ್ಮೆಲ್ಲರ ಅರ್ಥಪೂರ್ಣ ಸಹಕಾರ ಅತ್ಯಾವಶ್ಯಕ. ಆದುದರಿಂದ, ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತಿದ್ದೇನೆ.

ರಾಜ್ಯಪಾಲರ ಭಾಷಣದ ಪ್ರತಿಯನ್ನು ಸದನದಲ್ಲಿ ಹರಿದು ಹಾಕಿದ ಬಗ್ಗೆ

ದಿನಾಂಕ: 20-03-95 ರಂದು ಗೌರವಾನ್ವಿತ ರಾಜ್ಯಪಾಲರು ಜಂಟಿ ಸದನ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದಾಗ ಸದನದ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಎಲ್ಲಾ ನಿಯಮಗಳನ್ನು ಉಲ್ಲಂಘಿಸಿ ಅನುಚಿತ ರೀತಿಯಲ್ಲಿ ಸಭೆಯ ಘನತೆ ಮತ್ತು ಗಾಂಭೀರ್ಯಕ್ಕೆ ತೀವ್ರತರಾದ ಧಕ್ಕೆಯನ್ನುಂಟು ಮಾಡಿದ್ದಾರೆಂದು ಹಾಗೂ ತಾವೇ ತಯಾರಿಸಿದ ಪರ್ಯಾಯ ಭಾಷಣವನ್ನು ಓದುವುದರ ಮೂಲಕ ಗೌರವಾನ್ವಿತ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಯನ್ನುಂಟು ಮಾಡಿ ಗೌರವಾನ್ವಿತ ರಾಜ್ಯಪಾಲರ ಭಾಷಣವನ್ನು ಹರಿದು ಚೂರು ಸದನದಲ್ಲಿ ಎಸೆದಿರುವರೆಂದು ಹಾಗೂ ಸದನದ ಮಾನ್ಯ ಮಹಾರಾಷ್ಟ್ರ ಏಕೀಕರಣದ ಸದಸ್ಯರುಗಳಾದ ಶ್ರೀ ಬಿ.ಐ. ಪಾಟೀಲ್ ಮತ್ತು ಶ್ರೀ ನಾರಾಯಣರಾವ್ ತರಳಿಯವರು ಕೂಡ ಗೌರವಾನ್ವಿತ ರಾಜ್ಯಪಾಲರ ಭಾಷಣವನ್ನು ಧಿಕ್ಕರಿಸಿ, ತಾವೇ ತಯಾರು ಮಾಡಿ ತಂದ ಪರ್ಯಾಯ ಲಿಖಿತ ಭಾಷಣವನ್ನು ಓದುವುದರ ಮೂಲಕ ಅನುಚಿತ ರೀತಿಯಲ್ಲಿ ವರ್ತಿಸದುದೇ ಅಲ್ಲದೆ ಸದನದ ಬಾವಿಗೆ ಬಂದು ದಿಕ್ಕಾರ ಕೂಗಿಕೊಂಡು ನಿಯಮಬಾಹಿರವಾಗಿ ವರ್ತಿಸಿ ಸಭೆಯ ಘನತೆಗೆ ಕುಂದನ್ನು ತಂದಿರುವರೆಂದು ಅಪಾದಿಸಿ ಈ ವಿಷಯವನ್ನು ಸದನದ ಹಕ್ಕು ಚ್ಯುತಿ ಸಮಿತಿಗೆ ಒಪ್ಪಿಸಬೇಕೆಂದು ಕೋರಿ ಮಾನ್ಯ ಸದಸ್ಯರಾದ ಶ್ರೀ ಕೆ.ಎನ್. ನಾಗೇಗೌಡ ಹಾಗೂ ಇತರರು ದಿನಾಂಕ: 21-03-1995 ರಂದು ನನಗೆ ನಿಯಮ 191ರಡಿಯಲ್ಲಿ ಸೂಚನೆಯನ್ನು ನೀಡಿರುತ್ತಾರೆ.

ಈ ವಿಷಯವನ್ನು ದಿನಾಂಕ: 21-03-95ರಂದು ಸದನದಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಯಿತು. ಶ್ರೀ ವಾಟಾಳ್ ನಾಗರಾಜ್ ರವರು ಈ ವಿಷಯದ ಬಗ್ಗೆ ಮಾತನಾಡುತ್ತಾ ಈ ರೀತಿ ಪ್ರಸ್ತಾಪಿಸಿರುತ್ತಾರೆ.

"ನಾನು ಮಾಡಿರತಕ್ಕ ಭಾಷಣ, ನಾನು ಕಾಲಿನಲ್ಲಿ ಅಂತು ತುಳಿದಿಲ್ಲ, ಹರಿದು ಹಾಕಿದ್ದು ನಿಜ. ಸಭಾತ್ಯಾಗ ಮಾಡಿದ್ದು ನಿಜ, ಪ್ರತಿಭಟನೆ ಮಾಡಿದ್ದು ನಿಜ, ಕಪ್ಪು ಬಾವುಟ ಪ್ರದರ್ಶಿಸಿದ್ದು ನಿಜ, ಆದ್ದರಿಂದ ಇದರಲ್ಲಿ ನಾನು ಮಾಡಿದ್ದು ಸರಿ ಎಂದು ನಾನು ಅಂದುಕೊಂಡಿದ್ದೇನೆ. ಇದರಿಂದ ನಮ್ಮ ಉದ್ದೇಶ ಏನು ಅಂದರೆ, ವೈಯಕ್ತಿಕವಾಗಿ ರಾಜ್ಯಪಾಲರಿಗೆ ಅಗೌರವ ಮಾಡಬೇಕು ಎಂಬ ಉದ್ದೇಶ ಇಲ್ಲ, ಅದನ್ನು ನಾನು ಸ್ಪಷ್ಟಪಡಿಸಿದ್ದೇನೆ. ನಾನು ನನ್ನ ಭಾಷಣದಲ್ಲಿ ಇದನ್ನು ಸ್ಪಷ್ಟಪಡಿಸಿದ್ದೇನೆ. ಆದ್ದರಿಂದ, ಇದಕ್ಕಾಗಿ ನಿಲುವಳಿ ತಂದು ಬೆಳಿಗ್ಗೆ 11 ಗಂಟೆಯಿಂದ ಇಲ್ಲಿಯವರೆಗೆ ಚರ್ಚೆಗೆ ತಂದಿದ್ದಾರೆ. ನಾನು ನಿಮ್ಮನ್ನು ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ, ಯಾರು ನಿರ್ಣಯವನ್ನು ತಂದರು ಅವರು ಇದಕ್ಕೆ ಜವಾಬ್ದಾರರು. ಈ ಸದನದ ಕಾಲವನ್ನು ವ್ಯಯ ಮಾಡಿದ್ದಕ್ಕೆ, ಹಣವನ್ನು ವ್ಯಯ ಮಾಡಿದ್ದಕ್ಕೆ ಸಂಪೂರ್ಣವಾದ ಹೊಣೆ ಅವರೇ ಹೊರತು ನಮ್ಮದಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ"

ಈ ವಿಷಯದ ಬಗ್ಗೆ ಸಭಾ ನಾಯಕರಾದ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಸದನದಲ್ಲಿರುವ ಎಲ್ಲಾ ಪಕ್ಷದ ಸದಸ್ಯರುಗಳು ಸೇರಿ ಸದನದ ಘನತೆ ಗೌರವವನ್ನು ಕಾಪಾಡತಕ್ಕಂಥ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ, ನಿಮ್ಮಲ್ಲಿರುವ ಯಾರ ಮೇಲೂ ವೈಯಕ್ತಿಕ ದ್ವೇಷ ಸಾಧಿಸುವ ಪ್ರಶ್ನೆಯೇ ಇಲ್ಲ; ನಾನು ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮತ್ತೆ ಮಾನ್ಯ ಸಭಾ ನಾಯಕರು ತಮ್ಮ ಮಾತನ್ನು ಮುಂದುವರಿಸುತ್ತಾ ಈ ರೀತಿ ಹೇಳಿರುತ್ತಾರೆ.

"ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳುವಾಗ ತಮಗಿರತಕ್ಕಂಥ ಎಲ್ಲಾ ಶಕ್ತಿಯನ್ನು ಬಳಸಿಕೊಂಡು ತೀವ್ರವಾದ, ಕಠಿಣವಾದ ಶಬ್ದಗಳನ್ನು ಪ್ರಯೋಗಿಸಿ ಮತ್ತು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಚೌಕಟ್ಟಿನಲ್ಲಿ ಏನೆಲ್ಲಾ ಪದಗಳನ್ನು ಬಳಸಲು ಸಾಧ್ಯವಿದೆಯೋ ಎಲ್ಲಾ ಶಬ್ದಗಳನ್ನು ಪ್ರಯೋಗ ಮಾಡಿ ರಾಜ್ಯಪಾಲರ ಭಾಷಣವನ್ನು ತಿರಸ್ಕರಿಸುವ ಅಧಿಕಾರವಿದೆ. ಈ ಸದನಕ್ಕೆ ಈ ಅಧಿಕಾರ ಇಲ್ಲವೆಂದು ನಾನು ಹೇಳಿಲ್ಲ. ಈ ಸದನದಲ್ಲಿ ಇಂದು ರಾಜ್ಯಪಾಲರ ಭಾಷಣವಾಗಿ ನಾಳೆ ಬೆಳಿಗ್ಗೆ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸಲು ಭಾಷಣ ಮಾಡುವಾಗ ತಾವುಗಳೆಲ್ಲರೂ ಅದನ್ನು ಮೆಚ್ಚಿಕೊಳ್ಳಬೇಕೆಂದು ನಾವು ಅಪೇಕ್ಷಿಸುವುದು ಸಹಜವಲ್ಲ, ಅದು ವಸ್ತುಸ್ಥಿತಿಗೆ ವಿರೋಧವಾಗುತ್ತದೆ. ನಿಮ್ಮ ಕರ್ತವ್ಯ ಮಾಡಲು ಅಡ್ಡಿಪಡಿಸಲು ನಾವ್ಯಾರು? ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದಿಷ್ಟೆ: ನಿನ್ನೆ ರಾಜ್ಯಪಾಲರು ತಮ್ಮ ಭಾಷಣ ಮಾಡುವಾಗ ನಿಮ್ಮ ಮನಸ್ಸಿನಲ್ಲಿ ಯಾವ ರೀತಿಯ ಆಕ್ರೋಶವಿತ್ತೋ, ಇವೊತ್ತು ಎಷ್ಟು ಬೇಕಾದರೂ ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ತರಾಟೆಗೆ ತೆಗೆದುಕೊಳ್ಳುವ ಶಕ್ತಿ ಇದೆ. ಶಾಸನ ಸಭೆಯ ಇತಿಹಾಸದಲ್ಲಿ ನಿನ್ನೆ ನಡೆದ ಘಟನೆಯಂತೆಯೇ ಅನೇಕ ಸಾರಿ ಅಂತಹ ಘಟನೆಗಳು ಸದನದೊಳಗೆ ನಡೆದಿದೆ ..... ಯಾವ ರೀತಿ ಸದನದ ಕಾರ್ಯಕಲಾಪ ನಡೆಯಬೇಕೆನ್ನುವುದರ ಬಗ್ಗೆ ನೀವುಗಳೆಲ್ಲರೂ ಸಹಕರಿಸಿ, ಸದನದ ಘನತೆ ಗೌರವಗಳನ್ನು ಎತ್ತಿ ಹಿಡಿಯುವುದಕ್ಕೆ ಪ್ರಯತ್ನ ಮಾಡಿದರೆ ಇಡೀ ಸದನದಲ್ಲಿರುವ 224ಸದಸ್ಯರಿಗೂ ನಾನು ಋಣಿಯಾಗಿರುತ್ತೇನೆ. ಸದನದ ಪ್ರತಿಷ್ಠೆ, ಘನತೆ, ವರ್ಚಸ್ಸನ್ನು ಇನ್ನಷ್ಟು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡೋಣವೆಂದು ತಮ್ಮಲ್ಲಿ ವಿನಂತಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ"

ಇದೇ ವಿಷಯದ ಬಗ್ಗೆ ಮಹಾರಾಷ್ಟ್ರ ಏಕೀಕರಣದ ಸದಸ್ಯರಾದ ಶ್ರೀ ಬಿ.ಎ. ಪಾಟೀಲ್‌ರವರು ಪ್ರಸ್ತಾಪಿಸುತ್ತಾ ಈ ರೀತಿ ಹೇಳಿರುತ್ತಾರೆ.

"Sir, yesterday you have hard us. We have only shouted slogans. We did not do anything more than that. I only request you to allow us to speak for 2 minute".

ಚರ್ಚೆಯ ವಿಷಯವನ್ನಾದರಿಸಿ ಈ ವಿಷಯವನ್ನು ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸುವ ಸಲುವಾಗಿ ಒಂದು ವಿಶೇಷ ಸದನ ಸಮಿತಿಯನ್ನು ನೇಮಕ ಮಾಡುತ್ತೇನೆಂದು ತಿಳಿಸಿದ್ದೆನು. ಈ ವಿಷಯವನ್ನು ಮತ್ತೆ ನಾನು ಕೂಲಂಕಷವಾಗಿ ಪರಿಶೀಲಿಸಿರುತ್ತೇನೆ. ಶ್ರೀ ವಾಟಾಳ್ ನಾಗರಾಜ್‌ರವರು ತಮ್ಮ ಭಾಷಣದಲ್ಲಿ ರಾಜ್ಯಪಾಲರ ಅಥವಾ ಈ ಸದನದ ಘನತೆಗೆ ಕುಂದು ಬರುವಂತೆ ಯಾವ ಕಾರ್ಯವನ್ನು ಮಾಡಿಲ್ಲವೆಂದು ಸ್ಪಷ್ಟಪಡಿಸುತ್ತೇನೆ. ಇದು ಅಲ್ಲದೆ, ರಾಜ್ಯಪಾಲರ ವ್ಯಕ್ತಪಡಿಸಿಲ್ಲವೆಂದು ಸ್ಪಷ್ಟವಾಗಿರುತ್ತೆ. ಹಾಗೂ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರಾದ ಶ್ರೀ ಬಿ.ಐ. ಪಾಟೀಲ್ ಮಾತನಾಡುತ್ತಾ ತಮ್ಮ ಪಕ್ಷದವರು ತಮಗಾದ ಅನ್ಯಾಯದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಘೋಷಣೆ ಕೂಗಿರುತ್ತೇನೆಂದು, ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಯಾವುದೇ ರೀತಿಯ ಅಗೌರವ ತೋರಿಸಿಲ್ಲವೆಂದು ತಿಳಿಸಿರುತ್ತಾರೆ. ಸನ್ಮಾನ್ಯ ಸಭಾ ನಾಯಕರಾದ ಮಾನ್ಯ ಮುಖ್ಯ ಮಂತ್ರಿಗಳು ಸಹ ಮಾತನಾಡುತ್ತಾ ಗೌರವಾನ್ವಿತ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಸಮಯದಲ್ಲಿ ಕಟುವಾದ ಟೀಕೆಗೆ ಸಾಕಷ್ಟು ಅವಕಾಶ ಸದಸ್ಯರಿಗೆ ಇರುವುದನ್ನು ತತ್ವಶಃ ಒಪ್ಪಿಕೊಂಡಿರುತ್ತಾರೆ ಹಾಗೂ ಸದನದ ಘನತೆ ಗೌರವಕ್ಕೆ ಕುಂದುಂಟಾಗುವ ರೀತಿಯಲ್ಲಿ ಎಲ್ಲಾ ಸದಸ್ಯರು ನಡೆದುಕೊಳ್ಳುವ ಅವಶ್ಯಕತೆಯನ್ನು ಇಚ್ಚಿಸಿರುತ್ತಾರೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ರವರು ದಿನಾಂಕ : 08-04-95ರಂದು ಸನ್ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ಮಾತನಾಡುತ್ತಾ ತಮಗೆ ರಾಜ್ಯಪಾಲರ ಬಗ್ಗೆ ಅತ್ಯಂತ ಗೌರವ ಇದೆ ಎಂದು ಪುನರ್ಉಚ್ಚಿಸಿರುತ್ತಾ ಈ ರೀತಿ ಹೇಳಿರುತ್ತಾರೆ.

"ನನಗೆ ರಾಜ್ಯಪಾಲರ ಬಗ್ಗೆ ಬಹಳ ವೈಯಕ್ತಿಕವಾಗಿ ಅಪಾರ ಗೌರವ ಇದೆ. ಈಗಿರತಕ್ಕ ರಾಜ್ಯಪಾಲರ ಬಗ್ಗೆಯೂ ಸಹ ನನಗೆ ತೀವ್ರ ಗೌರವ ಇದೆ. ಅದರ ಬಗ್ಗೆ ಎರಡನೇ ಅಭಿಪ್ರಾಯವಿಲ್ಲ. ಈ ವ್ಯವಸ್ಥೆ ಸರಿಯಿಲ್ಲ ಎಂದು ನಾನು ವಾದ ಮಾಡಿದಾಗ, ಇದೆಲ್ಲಾ ಸರಿಯಿಲ್ಲ, ಈ ಸಭೆಯಲ್ಲಿ ಇದೆಲ್ಲ ಮಾಡುವುದಕ್ಕಾಗುವುದಿಲ್ಲ, ಹರಿಯುವುದು ಎಂದರೆ ಏನು? ಇದನ್ನು ಹರಿದು ಬಹಳ ಅಪರಾಧ ಮಾಡಿ ಬಿಟ್ಟಿದ್ದಾರೆ ಎಂದು ಆ ಒಂದು ಮಾತು ನಿಮ್ಮ ಹೃದಯದಲ್ಲಿ ಎಷ್ಟಿತ್ತೆಂದರೆ ನಿಮಗೆ ಏನಾದರೂ ಅವಕಾಶ ಇದ್ದರೆ ಗಲ್ಲಿಗೆ, ನೇಣು ಗಂಬಕ್ಕೆ ಏರಿಸುತ್ತಿದ್ದಿರೇನೋ? ಆದರೆ ಅವಕಾಶ ಇಲ್ಲ"

ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸುವುದು ಸೂಕ್ತವೆಂದು ನಾನು ಪರಿಗಣಿಸುತ್ತೇನೆ ಹಾಗೂ ದಿನಾಂಕ 21-03-1995ರಂದು ನಾನು ಈ ಸಭೆಗೆ ತಿಳಿಸಿರುವ ನನ್ನ ನಿಲುವನ್ನು ಪುನರ್ ಪರಿಶೀಲಿಸಿ ಈ ವಿಷಯವನ್ನು ಪರಿಶೀಲಿಸಲು ಸದನದ ವಿಶೇಷ ಸಮಿತಿಯನ್ನು ರಚಿಸುವ ಅಗತ್ಯತೆ ಇಲ್ಲವೆಂದು ಪ್ರತಿಪಾದಿಸುತ್ತೇನೆ, ಈ ಬಗ್ಗೆ ಸದನವೂ ಸಹ ಒಪ್ಪುತ್ತದೆ ಎಂದು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಸದನದ ಘನತೆ ಹಾಗೂ ಗೌರವವನ್ನು ಕಾಪಾಡುವ ದೃಷ್ಟಿಯಿಂದ ಸದನದ ಎಲ್ಲಾ ಸದಸ್ಯರು ತಮ್ಮ ಸಹಕಾರವನ್ನು ನೀಡಿ ಇಲ್ಲಿ ನಡೆಯುವ ಕಾರ್ಯಕಲಾಪಗಳಿಗೆ

ಅತ್ಯಂತ ಹೆಚ್ಚಿನ ರೀತಿಯಲ್ಲಿ ಅರ್ಥಪೂರ್ಣತೆಯನ್ನು ಒದಗಿಸಿಕೊಡಬೇಕೆಂದು ಹಾಗೂ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಬೇಕೆಂದು ಎಲ್ಲರಲ್ಲೂ ವಿನಂತಿಸುತ್ತಾ, ಈ ವಿಷಯವನ್ನು ಇಲ್ಲಿಗೆ ಮುಕ್ತಾಯಗೊಳಿಸುತ್ತೇನೆ.

ಸದನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹತ್ತನೇ ವಿಧಾನ ಸಭೆಯ ಎರಡನೆಯ ಅಧಿವೇಶದಲ್ಲಿನ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ ಈ ಕೆಳಕಂಡಂತಿದೆ:

ಸೋಮವಾರ, ದಿನಾಂಕ 20ನೇ ಮಾರ್ಚ್ 1995ರಂದು ಪ್ರಾರಂಭವಾದ ಈ ಸದನವು 21 ದಿನಗಳ ಕಾರ್ಯಕಲಾಪದ ನಂತರ ಇಂದು ಮುಕ್ತಾಯವಾಗಲಿದೆ.

ಒಟ್ಟು 125 ಗಂಟೆಗಳ ಕಾರ್ಯಕಲಾಪಗಳನ್ನು ನಡೆಸಲಾಗಿರುತ್ತದೆ. ಈ ಅವಧಿಯಲ್ಲಿ ಸದನಕ್ಕೆ ಮೊಟ್ಟ ಮೊದಲ—ಬಾರಿಗೆ—ಆಯ್ಕೆಗೊಂಡು ಬಂದಿರುವ 74 ಸದಸ್ಯರುಗಳು ಸಹ ವಿವಿಧ ಕಾರ್ಯಕಲಾಪಗಳಲ್ಲಿ ಭಾಗವಹಿಸಿರುತ್ತಾರೆ.

ಇತ್ತೀಚೆಗೆ ನಿಧನರಾದ 12 ಗಣ್ಯರುಗಳ ಗೌರವಾರ್ಥ ಈ ಅಧಿವೇಶನದಲ್ಲಿ ಸಂತಾಪವನ್ನು ಸೂಚಿಸಲಾಯಿತು.

ಈ ಅವಧಿಯಲ್ಲಿ 1298 ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 200 ಚುಕ್ಕೆ ಗುರುತಿನ ಪ್ರಶ್ನೆಗಳನ್ನು, 801 ಚುಕ್ಕೆ ರಹಿತ ಪ್ರಶ್ನೆಗಳನ್ನು ಉತ್ತರಿಸಲಾಯಿತು.

ಗಮನ ಸೆಳೆಯುವ 16 ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹೇಳಿಕೆ ನೀಡಿದರು.

ಮೂರು ಅರ್ಜಿಗಳನ್ನು ಸ್ವೀಕರಿಸಿದ್ದು ಒಂದು ಅರ್ಜಿಯನ್ನು ಸದನದಲ್ಲಿ ಮಂಡಿಸಲಾಯಿತು. ಅರ್ಧ ಗಂಟೆ ಚರ್ಚೆಗೆ 3 ಸೂಚನೆಗಳನ್ನು ಸ್ವೀಕರಿಸಲಾಯಿತು, ಆ ಪೈಕಿ ಯಾವುದನ್ನೂ ಚರ್ಚೆಗೆ ತೆಗೆದುಕೊಳ್ಳಲಿಲ್ಲ. ಖಾಸಗಿ ಸದಸ್ಯರ ಎರಡು ನಿರ್ಣಯಗಳನ್ನು ಸ್ವೀಕರಿಸಿದ್ದು, ಆ ಪೈಕಿ ಒಂದು ನಿರ್ಣಯವನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಿಯಮ 351ರಲ್ಲಿ 148 ಸೂಚನೆಗಳನ್ನು ಸ್ವೀಕರಿಸಿದ್ದು, 15 ಸೂಚನೆಗಳನ್ನು ಸದನದಲ್ಲಿ ಪ್ರಸ್ತಾಪಿಸಲಾಯಿತು.

ಈ ಅವಧಿಯಲ್ಲಿ ಏಳು ನಿಲುವಳಿ ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳಿಗೆ ಅಂಗೀಕಾರವನ್ನು ತಡೆ ಹಿಡಿಯಲಾಯಿತು.

ಒಂದು ಸೂಚನೆಯನ್ನು ನಿಯಮ 69ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಯಿತು.

ಈ ಅವಧಿಯಲ್ಲಿ 202 ಕಾಗದ ಪತ್ರಗಳನ್ನು ಸದನದಲ್ಲಿ ಒಪ್ಪಿಸಲಾಯಿತು.

1995-96ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ 3 ದಿವಸ ಚರ್ಚೆ ನಡೆಸಿ ಮತಕ್ಕೆ ಹಾಕಿ ಅಂಗೀಕರಿಸಲಾಯಿತು.

ಈ ಅವಧಿಯಲ್ಲಿ ಒಟ್ಟು 18 ವಿಧೇಯಕಗಳನ್ನು ಸದನದಲ್ಲಿ ಮಂಡಿಸಲಾಯಿತು. ಆ ಪೈಕಿ 18 ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಯಿತು.

ಈ ಅಧಿವೇಶನದ ಅವಧಿಯಲ್ಲಿ ಒಂದು ಶಾಸನಾತ್ಮಕ ನಿರ್ಣಯವನ್ನು ಚರ್ಚಿಸಿ ಅಂಗೀಕರಿಸಲಾಯಿತು.

ವಿವಿಧ ವಿರೋಧ ಪಕ್ಷಗಳ ಸದಸ್ಯರು ನಾಲ್ಕು ಬಾರಿ ಸಭಾತ್ಯಾಗ ಮಾಡಿರುತ್ತಾರೆ.